ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 24-01-1976.

# *ಪುರುಷಾರ್ಥದ ವಿಧಿ- ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ*

(पुरूषार्थ को तीव्र करने की युक्ति- अब नहीं तो कभी नहीं)

**ಆತ್ಮಿಕ ಸೇವಾದಾರಿ ಟೀಚರ್ಸ್ ನೊಂದಿಗೆ ಮಧುರ ಸಂಭಾಷಣೆ ಮಾಡುತ್ತಾ ಹೇಳಿರುವ ಅವ್ಯಕ್ತ ಬಾಪ್‌ದಾದಾರವರ ಮಧುರ ಮಹಾವಾಕ್ಯಗಳು.**

ಹೇಗೆ ವಿಶೇಷವಾದ ಸೇವಾರ್ಥವಾಗಿ ನಿಮಿತ್ತರಾಗಿರುವಂತಹ ವಿಶೇಷ ಆತ್ಮರು ಟೀಚರ್ಸ್ ಆಗಿದ್ದೀರೋ ಹಾಗೆಯೇ ಪುರುಷಾರ್ಥವೂ ನಡೆಯುತ್ತಿದೆಯೇ ಅಥವಾ ವಿದ್ಯಾರ್ಥಿಗಳ ಪುರುಷಾರ್ಥವು ಹೇಗಿದೆಯೋ ಅದೇರೀತಿ ನಡೆಯುತ್ತಿದೆಯೇ? ಪಾತ್ರದನುಸಾರವಾಗಿ ವಿಶೇಷವಾದ ಪುರುಷಾರ್ಥವು ಯಾವುದು ನಡೆಯುತ್ತಿದೆ? ಸಂಪೂರ್ಣರಾಗುವುದು, ಸತೋಪ್ರಧಾನರಾಗುವುದು ಇದಂತು ಎಲ್ಲರ ಲಕ್ಷ್ಯವಾಗಿದೆ. ಇದಂತು - ಇನ್‌ಜನರಲ್ (ಸಾಮಾನ್ಯ) ಆಯಿತು. ಆದರೆ ಟೀಚರ್ಸ್‌ನ ವಿಶೇಷವಾದ ಪುರುಷಾರ್ಥವು ಯಾವುದು ನಡೆಯುತ್ತಿದೆ? ವರ್ತಮಾನದಲ್ಲಂತು ಯಾವ ವಿಶೇಷ ಪುರುಷಾರ್ಥ ಮಾಡಬೇಕು ಅಥವಾ ಆಗಬೇಕಾಗಿದೆ - ಅದು ಇದೇ ಆಗಿದೆ, ಪ್ರತಿಯೊಂದು ಸಂಕಲ್ಪವು ಶಕ್ತಿಶಾಲಿಯಾಗಿರಲಿ, ಸಾಧಾರಣವಾಗಿರಬಾರದು, ಸಮರ್ಥವಾಗಿರಬೇಕು, ವ್ಯರ್ಥವಾಗಬಾರದು. ಟೀಚರ್ಸ್ ಎಂದರೆ ಅರ್ಥವೇನಾಗಿದೆ? ಸೇವಾಧಾರಿ, ಒಂದು ಸೆಕೆಂಡ್ ಸಹ ಸೇವೆಯಾಗದಂತೆ ಇರಬಾರದು. ಮುರುಳಿ ಓದುವುದು ಮತ್ತು ಪರಿಶೀಲನೆ ಮಾಡುವುದಂತು ಚಿಕ್ಕ ಮಾತಾಯಿತು!

ಹೇಗೆ ಸಮಯವು ಸಮೀಪ ಬರುತ್ತಿದೆ ಅಂದಮೇಲೆ ನಿಮಿತ್ತರಾಗಿರುವ ವಿಶೇಷ ಆತ್ಮರ ಪುರುಷಾರ್ಥವು ಇದಾಗಿರಬೇಕು - ಸಮಯಕ್ಕಿಂತಲೂ ವೇಗವಾದ ತೀವ್ರತೆಯಿಂದ ಓಡಬೇಕಾಗಿದೆ. ಇಷ್ಟು ಸಮಯ ಉಳಿದಿದೆ, ಸ್ವಲ್ಪದೂರವಿದೆ, ಓಡಿಬಿಡುತ್ತೇವೆ ಎನ್ನುವಂತಿರಬಾರದು. ಇದು ಬುದ್ಧಿಯಲ್ಲಿರಬೇಕು " *ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ"* ಪ್ರತಿಯೊಂದು ಸಂಕಲ್ಪ, ಪ್ರತೀ ಸೆಕೆಂಡಿಗಾಗಿ ಈ ಸ್ಲೋಗನ್ ಇರಬೇಕು. ಯಾವಾಗ ಈ ರೀತಿ ಈಗ ಇಂತಹ ಸಂಸ್ಕಾರವನ್ನು ತುಂಬಿಕೊಳ್ಳುತ್ತೀರೆಂದರೆ, ಈಗ(ಅಬಿ) ಎಂದು ಹೇಳುವಂತಹ ಆತ್ಮರು ಸತ್ಯಯುಗದ ಆದಿಯಲ್ಲಿ ಬರುತ್ತಾರೆ. ಇನ್ನೆಂದಿಗೂ(ಕಬಿ) ಎಂದು ಹೇಳುವವರು ಮಧ್ಯದಲ್ಲಿ ಬರುತ್ತಾರೆ. ಕೆಲವೊಮ್ಮೆ ಎಂದು ಹೇಳುವವರು ಸಮಯದ ನಿರೀಕ್ಷಣೆ ಮಾಡುತ್ತಾರೆ ಅದಕ್ಕಾಗಿ ಪದವಿಯಲ್ಲಿಯೂ ನಿರೀಕ್ಷಣೆ ಮಾಡಬೇಕಾಗುತ್ತದೆ. ಅಂದಮೇಲೆ ಪ್ರತೀ ಸೆಕೆಂಡ್, ಪ್ರತೀ ಸಂಕಲ್ಪದಲ್ಲಿ ಈ ಸ್ಲೋಗನ್ ನೆನಪಿರಲಿ. ಒಂದುವೇಳೆ ಈ ಪಾಠವು ಪರಿಪಕ್ವ ಆಗುವುದಿಲ್ಲವೆಂದರೆ ಸದಾ ಬಲಹೀನತೆಯ ಸಂಸ್ಕಾರವಿರುತ್ತದೆ. ಮಹಾವೀರನ ಸಂಸ್ಕಾರವಾಗಿದೆ "ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ" ನಮಗಿಂತಲೂ ಇವರು ಮುಂದಿದ್ದಾರೆ, ಇವರು ಮಾಡುತ್ತಾರೆಂದರೆ ನಾವು ಮಾಡುತ್ತೇವೆ ಇದು ಹುಡುಗಾಟಕೆಯ ಸಂಸ್ಕಾರವಾಗಿದೆ. ಯಾವ ಸಂಕಲ್ಪ ಬಂದಿದೆಯೋ ಅದನ್ನು ಈಗ ಮಾಡಲೇಬೇಕು. ನಾಳೆಯಲ್ಲ, ಇವತ್ತು. ಇವತ್ತಲ್ಲ ಈಗ ಅರ್ಥಾತ್ ಈಗ ಮಾಡಬೇಕಾಗಿದೆ.

ಎಲ್ಲರೂ ವಿಶೇಷ ಆತ್ಮರೆ ತಾನೇ? ನಿಮ್ಮನ್ನು ಚಿಕ್ಕವರಾಗಿ ಭಾವಿಸುತ್ತಿಲ್ಲ ತಾನೇ? ಪುರುಷಾರ್ಥದಲ್ಲಿ ಪ್ರತಿಯೊಬ್ಬರೂ ದೊಡ್ಡವರೆ ಕಾರ್ಯ ವ್ಯವಹಾರದಲ್ಲಿ ಚಿಕ್ಕವರು, ದೊಡ್ಡವರು ಇರುತ್ತಾರೆ. ಆದರೆ ಪುರುಷಾರ್ಥದಲ್ಲಿ ಚಿಕ್ಕ ದೊಡ್ಡ ಎಂಬುದು ಇರುವುದಿಲ್ಲ. ಪುರುಷಾರ್ಥದಲ್ಲಾದರೆ ಚಿಕ್ಕವರಾದರು ಮುಂದಕ್ಕೆ ಹೋಗಬಹುದು. ಕಾರ್ಯ, ವ್ಯವಹಾರದಲ್ಲಾದರೆ ಮರ್ಯಾದೆಯ ವಿಷಯ ಇರುತ್ತದೆ. ಪುರುಷಾರ್ಥದಲ್ಲಿ ಮರ್ಯಾದೆ ಎಂಬ ವಿಷಯ ಇಲ್ಲ. ಪುರುಷಾರ್ಥದಲ್ಲಿ ಯಾರು ಮಾಡಿದರೆ ಅವರೇ ಪಡೆಯುತ್ತಾರೆ. ಈಗ ಪರಿಶೀಲಿಸಿಕೊಳ್ಳಿರಿ ಇಂತಹ ಪುರುಷಾರ್ಥ ಇದೆಯೇ ಅಥವಾ ಎಲ್ಲರೂ ಹೇಗೆ ನಡೆಯುತ್ತಿದ್ದಾರೆಯೋ ಹಾಗೆಯೇ ಸಾಧಾರಣವಾಗಿ

ನಡೆಯುತ್ತಿದ್ದೀರಾ? ಟೀಚರ್ ಸದಾ ಹರ್ಷಿತವಾಗಿದ್ದೀರಾ ಟೀಚರ್ಸ್‌ಗೆ ಅನೇಕರ ಆಶೀರ್ವಾದಗಳು ಎಂಬ ಸಹಾಯ(ಲಿಫ್ಟ್) ಕೂಡ ಲಭಿಸುತ್ತದೆ ಮತ್ತು ಯಾರಾದರೂ ಬಲಹೀನವಾಗಲು ನಿಮ್ಮಿತ್ತವಾದರೆ ಪಾಪವೂ ಬರುತ್ತದೆ. ಅರ್ಥವಾಯಿತೆ? ಆ ಪಾಪಭಾರದಿಂದ ಏನನ್ನು ಮಾಡಬಯಸುತ್ತೀರೋ ಅದನ್ನು ಮಾಡಲಾಗುವುದಿಲ್ಲ. ಭಾರ ಇರುವವರು ಮೇಲಕ್ಕೆ ಏಳಲಾಗುವುದಿಲ್ಲ. ಆದ್ದರಿಂದ ಇಚ್ಛೆ ಇದ್ದಾಗಲೂ, ಬದಲಾಗಲಾಗುತ್ತಿಲ್ಲ ಎಂದರೆ ತಪ್ಪದೇ ಭಾರ ಇದ್ದ ಹಾಗೆ. ವಿಶೇಷ ಯೋಗದಿಂದ, ಮರ್ಯಾದೆಗಳಿಂದ ಮತ್ತು ಲಗನ್ನಿನಿಂದ ಆ ಭಾರವನ್ನು ಬಸ್ಮ ಮಾಡಿಕೊಳ್ಳಿರಿ. ಇಲ್ಲದಿದ್ದರೆ ಆ ಭಾರದಿಂದಲೇ ಸಮಯ ಕಳೆದುಯುತ್ತದೆ ಮುಂದಕ್ಕೆ ಹೋಗಲಾಗುವುದಿಲ್ಲ. ಅಮೃತ ವೇಳೆಯಿಂದ ನಿಮ್ಮ ಸ್ಥಿತಿಯನ್ನು ತಯಾರು ಮಾಡಿಕೊಳ್ಳಿರಿ. ಯಾವ ಸ್ಥಿತಿ ಇದ್ದರೆ ಅದರ ಪ್ರಮಾಣವಾಗಿ ಸ್ಥಿತರಾಗಬಲ್ಲಿರಾ? ಇದನ್ನು ಪರಿಶೀಲಿಸಿಕೊಳ್ಳಿ, ನಿಮ್ಮ ಸ್ಥಿತಿಯನ್ನು ಸರಿ ಮಾಡಿಕೊಳ್ಳಿರಿ, ಒಂದು ವೇಳೆ ಸರಿಯಾಗಿಲ್ಲದಿದ್ದರೆ ಪರಿಶೀಲಿಸಿಕೊಳ್ಳುವುದರಿಂದ ಸರಿಯಾಗಿ ಬಿಡುತ್ತದೆ, ಒಳ್ಳೆಯದು.

ಅವ್ಯಕ್ತ ಮುರಳಿ 24-01-1976.

***ಪುರುಷಾರ್ಥವನ್ನು ತೀವ್ರ ಮಾಡುವ ವಿಧಿ - ಈಗ ಇಲ್ಲದಿದ್ದರೆ ಇನ್ನೆಂದಿಗೂ ಇಲ್ಲ.***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನ್ನ ಪ್ರತಿ ಸಂಕಲ್ಪ ಶಕ್ತಿಶಾಲಿಯಾಗಿ ಇರುವ ಸಮರ್ಥ ಸ್ವರೂಪ.

2. ನಾನು ಒಂದು ಸೆಕೆಂಡ್ ಕೂಡ ಸೇವೆ ಇರದೆ ಇರುವ ಸೇವಾಧಾರಿ.

3. ನಾನು ಈಗಿಲ್ಲದಿದ್ದರೆ ಇನ್ನೆಂದಿಗೂ ಇಲ್ಲ ಎಂಬ ಸ್ಲೋಗನನ್ನು ಬುದ್ಧಿಯಲ್ಲಿಟ್ಟುಕೊಂಡು ಸಮಯಕ್ಕಿಂತ ಮೊದಲೇ ತಯಾರಾಗಿದ್ದೇನೆ.

4. ನಾನು ಪ್ರತಿಯೊಂದು ಸಂಸ್ಕಾರವನ್ನು ಈಗಲೇ ಧಾರಣೆ ಮಾಡಿ ಸತ್ಯಯುಗದ ಆದಿಯಲ್ಲಿ ಜನ್ಮವನ್ನು ಪಡೆದಿದ್ದೇನೆ.

5. ನಾನು ಯಾವ ಸಂಕಲ್ಪ ಬರುತ್ತದೆಯೋ ಅದನ್ನು ನಾಳೆಯಲ್ಲ, ಇವತ್ತು, ಈವತ್ತಲ್ಲ ಈಗಲೇ ಮಾಡುವಂತಹ ಮಹಾವೀರನು.

6. ನಾನು ನನ್ನ ಸ್ಥಿತಿಯನ್ನು ಪರಿಶೀಲಿಸಿಕೊಂಡು ವಿಶೇಷ ಯೋಗದಿಂದ, ಮರ್ಯಾದೆಗಳಿಂದ ಮತ್ತು ಲಗನ್ನಿನಿಂದ ಪಾಪಭಾರವನ್ನು ಭಸ್ಮ ಮಾಡಿಕೊಂಡಿದ್ದೇನೆ.